International Journal of Kannada Research
www.kannadajournal.com

ISSN: 2454–5813
IJKR 2023; 9(4): 06-09
© 2023 IJKR
www.kannadajournal.com
Received: 14-06-2023
Accepted: 16-07-2023

**ಡಾ.ಎಸ್.ಶಶಿರೇಖಾ**
ಅಸೋಸಿಯೇಟ್ ಪ್ರೊಫೆಸರ್, ಕನ್ನಡ ವಿಭಾಗ, ಸರ್ಕಾರಿ ವಿಜ್ಞಾನ ಕಾಲೇಜು, ನೃಪತುಂಗ ವಿಶ್ವವಿದ್ಯಾಲಯ, ಬೆಂಗಳೂರು, ಕರ್ನಾಟಕ, ಭಾರತ್

**Corresponding Author:**
**ಡಾ.ಎಸ್.ಶಶಿರೇಖಾ**
ಅಸೋಸಿಯೇಟ್ ಪ್ರೊಫೆಸರ್, ಕನ್ನಡ ವಿಭಾಗ, ಸರ್ಕಾರಿ ವಿಜ್ಞಾನ ಕಾಲೇಜು, ನೃಪತುಂಗ ವಿಶ್ವವಿದ್ಯಾಲಯ, ಬೆಂಗಳೂರು, ಕರ್ನಾಟಕ, ಭಾರತ್

# ‘ಲಾಳಿ ಬಿಟ್ಟ ಎಳೆ’ – ಒಂದು ವಿಮರ್ಶಾತ್ಮಕ ನೋಟ

**ಡಾ.ಎಸ್.ಶಶಿರೇಖಾ**

**ಪೀಠಿಕೆ**

ಆಧುನಿಕ ಜಗತ್ತು ಹೊಸ ಯಂತ್ರ ಲೋಕವನ್ನು ಪರಿಚಯಿಸಿದ್ದರೂ ಅದೆಲ್ಲವೂ ಭಾವರಹಿತವಾದ ನಾಗಾಲೋಟದಲ್ಲಿ ಸಿಲುಕಿ ಇಂದಿನ ಜನರ ಬದುಕನ್ನು ನಾಶಮಾಡುತ್ತಿದೆ. ಭಾರತೀಯ ಕುಶಲ ಕಲೆಗಳು ವ್ಯಕ್ತಿಯ ಭಾವನೆಗಳೊಂದಿಗೆ ಬೆಸೆದುಕೊಂಡು ಆತನ ನಡೆ ನುಡಿಯಲ್ಲಿ ಹಾಸುಹೊಕ್ಕಾಗಿ ಜೀವನದ ಸಾರ್ಥಕತೆಗೆ ಕಾರಣವಾಗಿತ್ತು. ಕಸುಬು ಮತ್ತು ಕೌಶಲ್ಯವನ್ನೇ ಜ್ಞಾನ ಮಾಧ್ಯಮವಾಗಿಸಿಕೊಂಡು ಭಾವಕ್ಕೆ ಅಕ್ಷರಗಳ ರೂಪ ಕೊಟ್ಟು ತಮ್ಮ ಜೀವನದ ಅನುಭವಾಮೃತವನ್ನೇ ಕವನಗಳಲ್ಲಿ ಎರಕಹೊಯ್ದು ಸಾಹಿತ್ಯ ಲೋಕಕ್ಕೊಂದು ಹೊಸ ಕೃತಿ ಪುಷ್ಪವನ್ನು ಕೊಟ್ಟವರು ಡಾ.ಶಿವಲಿಂಗಮೂರ್ತಿಯವರು. ಇತ್ತೀಚಿಗೆ ಪ್ರಕಟಗೊಂಡ ಕವನ ಸಂಕಲನ **‘ಲಾಳಿ ಬಿಟ್ಟ ಎಳೆ’**. ಹದವಾದ ಎಳೆಗಳನ್ನು ವ್ಯವಸ್ಥಿತವಾಗಿ ಜೋಡಿಸಿ ಎಳೆದು ಕಟ್ಟಿ ನೇಯುತ್ತಾ, ಬೇಕೆಂದಾಗ ಚಿತ್ತಾರ ಮೂಡಿಸುತ್ತಾ, ಬಟ್ಟೆ ನೇಯುವ ಕಸುಬು ಕೈಮಗ್ಗದಲ್ಲಿ ಕಾಣಬಹುದು. ಕಾವ್ಯ ನಿರ್ಮಿತಿ ಕೂಡಾ ಇಷ್ಟೇ ನಾಜೂಕಾದ ಪ್ರಕ್ರಿಯೆ. ಹದವಾದ ಭಾವನೆಗಳನ್ನು ಅಕ್ಷರಗಳ ಎಳೆಗಳಲ್ಲಿ ಜೋಡಿಸಿ ಕಾವ್ಯವೆಂಬ ಬಟ್ಟೆಯನ್ನು ಚಿತ್ತಾರಗಳೊಂದಿಗೆ ನೇಯುವುದು ಕವಿಯ ಭಾವಾಭಿವ್ಯಕ್ತಿಯ ಸಾಮರ್ಥ್ಯವನ್ನು ತೋರಿಸುತ್ತದೆ. ಕುಲ ಕಸುಬುಗಳು ನಾಶವಾಗಿ ಎಲ್ಲ ದೇಸಿತನವನ್ನು ಕಳೆದುಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಕವಿ ಶಿವಲಿಂಗಮೂರ್ತಿಯವರ ಈ ಕವನ ಸಂಕಲನ ಕುಶಲ ಕರ್ಮಿಗಳ ಮೌನಮುರಿದ ನುಡಿಗಳಾಗಿ ಕನ್ನಡ ಕಾವ್ಯ ಲೋಕದಲ್ಲಿ ಸ್ಫೂರ್ತಿಯ ಸೆಲೆಯಾಗಿ ಮಾರ್ಪಡುತ್ತದೆ. ಬದುಕು ಕಳೆದುಕೊಂಡೆವೆಂದು ನರಳುವ ಕುಶಲಕರ್ಮಿ ಮತ್ತೆ ತನ್ನ ಕೆಲಸವನ್ನು ಹೊಸ ಹುರುಪುಕೊಟ್ಟು ಪ್ರಾರಂಭಿಸುತ್ತಾನೆ. ತನ್ನ ಅನುಭವದ ನುಡಿಗಳನ್ನು, ತನ್ನ ಕಸುಬಿನ ಪ್ರಾವೀಣ್ಯತೆಯನ್ನು ಹೊಸದೊಂದು ಅಭಿವ್ಯಕ್ತಿಯೊಂದಿಗೆ ಸಮಾಜಕ್ಕೆ ಕೊಡುತ್ತಾನೆ ಎಂಬ ಸೂಚನೆ, ಅಂಥದ್ದೊಂದು ಸಂಚಲನ ಸೃಷ್ಟಿಸುವ ಶಕ್ತಿ ಈ ಕವನಸಂಕಲನದ **‘ಅವ್ವನೆಂದರೆ ನನ್ನವ್ವ’** ಕವಿತೆಗಿದೆ.

ಕವಿಯ ತಳಮೂಲ ಸಂಸ್ಕೃತಿಯ ಬೇರುಗಳು ಹೊಸ ಚಿಗುರು ಮತ್ತು ಹೊಸ ಹೂವಿನೊಂದಿಗೆ ಬೆರೆತ ಪರಿಣಾಮ ಹೊಸ ಕಾವ್ಯಕುಸುರಿ ಸಾಧ್ಯವಾಗಿದೆ. ಕಸುಬಿನ ಕೌಶಲ್ಯದೊಂದಿಗೆ ವಚನಕಾರರ, ತತ್ವ ಪದಕಾರರ ಪ್ರಭಾವದಿಂದಾಗಿ ಸತ್ವಯುತಗೊಂಡಿದೆ ಕವಿ ಮನಸ್ಸು. ಕವಿ **‘ಲಾಳಿ ಬಿಟ್ಟ ಎಳೆ’** ಎಂಬ ಅರ್ಥಪೂರ್ಣ ಶೀರ್ಷಿಕೆಯೊಂದಿಗೆ ತಮ್ಮ ವೃತ್ತಿ ಮತ್ತು ಪ್ರವೃತ್ತಿ ಜೀವನದ ಸಕಲ ಅನುಭವಗಳ ಎರಕವೆಂಬಂತೆ ಅತ್ಯುತ್ತಮವಾದ ಕವಿತೆಗಳನ್ನು ರಚಿದ್ದಾರೆ. ಲಾಳಿ ಬಿಟ್ಟ ಎಳೆಗಳಲ್ಲಿ ಒಂದೊಂದು ಕವನವೂ ಒಂದು ಬಣ್ಣದ ಎಳೆಗಳಂತೆ ಪ್ರತ್ಯೇಕವಾದ ಸೊಬಗನ್ನು ಹೊಂದಿದ್ದರೂ ಒಂದು ಕಡೆ ಜೋಡಿಸಲ್ಪಟ್ಟು ಒಂದು ನೇಯ್ಗೆಯ ಜೋಡಣೆಯಲ್ಲಿ ಸಿಕ್ಕಿ ಇಡೀ ಕೃತಿಯ ಸೌಂದರ್ಯಕ್ಕೆ ಸೊಬಗು ತಂದಿವೆ. ಈ ಕವನ ಸಂಕಲನದಲ್ಲಿ ೩೮ ಕವಿತೆಗಳಿವೆ. ಈ ಎಲ್ಲ ಕವಿತೆಗಳನ್ನು ಅಧ್ಯಯನದ ದೃಷ್ಟಿಯಿಂದ ಕೆಳಕಂಡಂತೆ ಮೂರು ಭಾಗಗಳಾಗಿ ವಿಂಗಡಿಸಿ ವಿಶ್ಲೇಷಿಸಬಹುದು.

೧. ಪ್ರತ್ಯೇಕ ನಿಲುವಿನ ಕವನಗಳು
೨. ಪ್ರಾಪಂಚಿಕ ಕವನಗಳು
೩. ಪಾರಮಾರ್ಥಿಕ ಕವನಗಳು

ಪ್ರಾಪಂಚಿಕ ವಿಚಾರಗಳನ್ನು ಒಳಗೊಂಡ ಕವನಗಳು ಕವಿಯ ಅನುಭವಾಮೃತದಲ್ಲಿ ಬೆಳೆದು ಓದುಗರ ಮನಸೂರೆಗೊಳ್ಳುತ್ತವೆ. ತತ್ವಪದಗಳ ಪ್ರಭಾವದಲ್ಲಿ ರಚನೆಯಾಗಿರುವ ಕೆಲವು ಕವನಗಳು ಪಾರಮಾರ್ಥಿಕವಾದ ವಿಚಾರಗಳನ್ನು ಹೇಳುತ್ತವೆ. ಇನ್ನು ಕೆಲವು ಕವನಗಳು ಪ್ರತ್ಯೇಕವಾದ ವಸ್ತು ಒಳಗೊಂಡು ವಿಭಿನ್ನ ನೆಲೆಯಲ್ಲಿ ನಿಲ್ಲುತ್ತವೆ.

**೧. ಪ್ರತ್ಯೇಕ ನಿಲುವಿನ ಕವನಗಳು**

ಈ ಸಂಕಲನದ ಐದು ಕವನಗಳು ಮಾತ್ರ ಭಿನ್ನ ನೆಲೆಯಲ್ಲಿ ನಿಲ್ಲುತ್ತವೆ. ಜೇಡರ ದಾಸಿಮಯ್ಯನನ್ನು ಕುರಿತಿರುವ 'ಲಾಳಿ ಬಿಟ್ಟ ಎಳೆ', ಶಾಂತವೇರಿ ಗೋಪಾಲಗೌಡರನ್ನು ಕುರಿತ 'ಲಾವಣಿ', ಸರಹಪಾದನನ್ನು ಕುರಿತು ಬರೆದಿರುವ 'ಶರವ ಬಿಡು ಸರಹ', ಅಮ್ಮನನ್ನು ಕುರಿತು ಬರೆದಿರುವ 'ಅವ್ವನೆಂದರೆ ನನ್ನವ್ವ' ಮತ್ತು ಸಂಗಾತಿಯನ್ನು ಕುರಿತು ಬರೆದಿರುವ 'ಅಳದಿರು ಅರ್ಧಾಂಗಿ' ಕವನಗಳು ಪ್ರತ್ಯೇಕವಾದ ನಿಲುವಿನ ಸೂಕ್ಷ್ಮ ಭಾವನೆಗಳನ್ನು ಹೃದಯಸ್ಪರ್ಶಿಯಾಗಿ ಅಭಿವ್ಯಕ್ತಿಸುತ್ತವೆ. ಒಂದೊಂದು ಕವನವನ್ನು ಪ್ರತ್ಯೇಕವಾದ ಭಾವನಾತ್ಮಕ ನೆಲೆಗಳಲ್ಲಿಯೇ ಅರ್ಥಮಾಡಿಕೊಳ್ಳಬೇಕಾಗುತ್ತದೆ.

ದಾಸಿಮಯ್ಯನ ಸ್ಮರಣೆಗಾಗಿ ಬರೆದಿರುವ 'ಲಾಳಿ ಬಿಟ್ಟ ಎಳೆ' ಕವನದಲ್ಲಿ ಚೋಟುದ್ದ ಲಾಳಿಯನು ಮಾರುದ್ದ ಬೀಸಿದ ದಾಸಿಮಯ್ಯ ಚಟಕ ಪಟಕ ಧ್ವನಿಯು ಅನುರಣಿಸುವಂತೆ ಮಾಡಿ ಬರಿಯ ಬಟ್ಟೆಯನ್ನಲ್ಲದೆ ಜೀವನದ ಬಟ್ಟೆಯನ್ನು ಬಿಡಿಸಿ ಅರ್ಥೈಸಿದ್ದಾನೆ. ನೆಲ ಮುಗಿಲನು ದಾಟಿ ನಡೆವ ಆತನ ಜ್ಞಾನದ ಬೆಳಕು ಸಿದ್ಧ, ಬುದ್ಧ ಮಾರ್ಗಗಳಲ್ಲಿ ಸಂಚರಿಸಿ ಶ್ರೇಷ್ಠ ಶರಣ ಫಲವಾಗಿ ಮಾರ್ಪಟ್ಟಿದೆ. ಅನ್ನ ಮತ್ತು ಅರಿವು ಎರಡಕ್ಕೂ ದಾರಿ ತೋರಿರುವ ನೇಯ್ಗೆಯ ಕೆಲಸ ಕಾಯಕದ ಶ್ರೇಷ್ಠತೆಯನ್ನು ತಿಳಿಸಿದೆ. ಬೌದ್ಧ ಸರಹಪಾದನ ಬಗ್ಗೆ ಹೇಳುವ ಕವನ 'ಶರವ ಬಿಡು ಸರಹ' ಇದೇ ಮಾದರಿಯಲ್ಲಿ ರಚನೆಯಾಗಿದೆ. ಭೂತದ ಬೆನ್ನೇರಿ ನಡೆದ ಸರಹನ ನೆನಪುಗಳು ಏರಲಾರದೇ, ಇಳಿಯಲಾರದೇ ಬರಿಯ ಬಿಂಬವಾಗಿ ಕಾಡುತ್ತವೆ. ಭಾವ ಕಲ್ಮಶಗಳನ್ನು ಕಳೆದುಕೊಂಡಾಗ ವ್ಯಕ್ತಿ ತಾನು ತಾನಾಗಿ ನಿಲ್ಲಲು ಸಾಧ್ಯವಾಗುತ್ತದೆ.

ಕವನ ಸಂಕಲನದಲ್ಲಿರುವ 'ಲಾವಣಿ' ಶಾಂತವೇರಿ ಗೋಪಾಲ ಗೌಡರ ಜೀವನ ಚರಿತೆ ಕುರಿತದ್ದು. ಹಾಡಲು ಅನುಕೂಲಕರವಾದ ಗೇಯತೆ ಲಯ ಹೊಂದಿದ್ದು ದೇಶಭಕ್ತಿಯನ್ನು ಹೆಚ್ಚಿಸುತ್ತದೆ. ಭಾರತದ ಇತಿಹಾಸ ಪುಟದಲ್ಲಿ ನಾಯಕ ಶಾಂತವೇರಿ ಗೋಪಾಲಗೌಡರ ಹೆಸರು ಉಳಿಯಲು ಕಾರಣವಾದ ಎಲ್ಲ ವಿಚಾರಗಳು ಲಾವಣಿಯಲ್ಲಿ ಬಂದಿವೆ. ಶಿವಮೊಗ್ಗ ಜಿಲ್ಲೆಯ ಅರಗ ಗ್ರಾಮದಲ್ಲಿ ೧೯೨೩ ಮಾರ್ಚ್ ೧೪ ಶೇಷಮ್ಮ ಮತ್ತು ಕೊಲ್ಲೂರಯ್ಯ ಗೌಡ ದಂಪತಿಗಳ ಮಗನಾಗಿ ಹುಟ್ಟಿ, ತೀರ್ಥಹಳ್ಳಿಯಲ್ಲಿ ವಿದ್ಯಾಭ್ಯಾಸ ಮಾಡಿ ಸ್ವತಂತ್ರ್ಯ ಚಳುವಳಿಯಲ್ಲಿ ಧುಮುಕಿದ ಹೋರಾಟಗಾರ ಬ್ರಿಟೀಷರ ವಿರುದ್ಧ ನಿಂತು ಗಾಂಧಿಯವರನ್ನು ಅನುಸರಿಸಿ ಜೈಲುವಾಸ ಅನುಭವಿಸಿದ ಧೀಮಂತ ವ್ಯಕ್ತಿ ಗೋಪಾಲಗೌಡರು. ಟಾಲ್‌ಸ್ಟಾಯ್, ಮಾರ್ಕ್ಸ್ ಕೃತಿಗಳನ್ನು ಓದಿ ಸಮಾನತೆಯ ಕನಸು ಕಂಡವರು. ಲೋಹಿಯಾ ಚಿಂತನೆಯ ನೆರಳಲ್ಲಿ ಸಮಾಜವಾದದ ಕಡೆಗೆ ಹೊರಳಿದವರು. ರೈತರಿಗಾಗಿ ಸಮಾವೇಶ ನಡೆಸಿದವರು, ಜಮೀನ್ದಾರಿ ಪದ್ಧತಿಯ ನಿರ್ಮೂಲನೆಗೆ ಹೋರಾಟ ನಡೆಸಿದ ನಾಯಕ ಗೋಪಾಲಗೌಡರು. ರೈತರ ಮೇಲಾಗುತ್ತಿದ್ದ ದಬ್ಬಾಳಿಕೆ ದೌರ್ಜನ್ಯವನ್ನು ಖಂಡಿಸಿ ಹೋರಾಟ ಮಾಡಿ ರೈತರಿಗೆ ನ್ಯಾಯ ಕೊಡಿಸಲು 'ಉಳುವವನೇ ಹೊಲದೊಡೆಯ' ಎಂಬ ಕಾನೂನು ತರಲು ಹೋರಾಟ ಮಾಡಿದ ಪರಿ ಲಾವಣಿಯಲ್ಲಿ ಚಿತ್ರಣಗೊಂಡಿದೆ. ಸ್ವಾತಂತ್ರ್ಯಾನಂತರ ಶಾಸಕರಾಗಿ ಆಯ್ಕೆಗೊಂಡು ಭೂಸುಧಾರಣೆಗಾಗಿ ಹೋರಾಡುತ್ತಾರೆ. ಬಡವ, ಭೂಹೀನ ಮತ್ತು ನಿರ್ಗತಿಕರಿಗೆ ನವ ಚೈತನ್ಯವಾಗಿ ನ್ಯಾಯಕ್ಕಾಗಿ ದುಡಿಯುತ್ತಾರೆ. ಶಾಂತವೇರಿ ಗೋಪಾಲಗೌಡರ ತತ್ವ ಆದರ್ಶ, ನಿಷ್ಠೆ, ಪ್ರಾಮಾಣಿಕತೆ ಮತ್ತು ಹೋರಾಟದ ಎಲ್ಲ ವಿಚಾರಗಳನ್ನು ಲಾವಣಿಯಲ್ಲಿ ಬಹಳ ಶಕ್ತವಾಗಿ ಸರೆಹಿಡಿದಿರುವ ಕವಿ ದೇಶಭಕ್ತಿ ಭಾವ ಮೂಡುವಂತೆ ಲಾವಣಿಯನ್ನು ಕಟ್ಟಿದ್ದಾರೆ.

'ಅವ್ವನೆಂದರೆ ನನ್ನವ್ವ' ತಾಯಿಯ ಸ್ಥಾನಕ್ಕೆ ಮತ್ತೊಷ್ಟು ಮೆರುಗು ತುಂಬಿ ಚಿತ್ರಿಸಿರುವ ಕವಿತೆ. ಓದುಗನನ್ನು ವಾತ್ಸಲ್ಯ ಭಾವದಲ್ಲಿ ಮಿಂದು ಧನ್ಯತೆಗೆ ಸರಿಸುತ್ತದೆ. ಅಕ್ಷರಗಳು ದಕ್ಕದಿದ್ದರೂ ಜ್ಞಾನಿ, ವಿಶಾಲ ಹೃದಯಿ, ಮುಗ್ಧತೆ ಮತ್ತು ಮಮತೆಗೆ ಸಾಕಾರ ಮೂರ್ತಿ ಅವ್ವ. ಸಂಸಾರದಲ್ಲಿ ದಾಸಿಯಾಗಿ ದುಡಿಯುತ್ತಾ, ಮಕ್ಕಳನ್ನು ಮಮತೆಯಿಂದ ಸಾಕುತ್ತಾ, ದಾನ ಧರ್ಮವ ಮಾಡುತ್ತಾ ಬದುಕು ಸವೆಸಿದ ಜೀವ ಎಷ್ಟು ಹೇಳಿದರೂ ಕವಿ ಮನಕ್ಕೆ ತೃಪ್ತಿ ಇಲ್ಲವಾಗಿದೆ ಇಲ್ಲಿ. ಹೂವಿನ ವ್ಯಾಪಾರ ಮಾಡಿ ಹೊಟ್ಟೆಗೆ ಬಟ್ಟೆಗೆ ಕೊಟ್ಟವಳು, ಎಂಟು ಮಕ್ಕಳನ್ನು ಹೆತ್ತು ಚೊಚ್ಚಲ ಬಳ್ಳಿಯನ್ನು ತವರಲ್ಲಿ ನೆಟ್ಟು ಮತ್ತೆ ತನ್ನ ಮನೆ ಬೆಳಗಿಸಿಕೊಂಡು ಸಂಸಾರದ ಕಳಸವಾದ ಹೆಣ್ಣು ತನ್ನಂತೆ ಕಷ್ಟಪಡುವ ಹೆಣ್ಣಗಳ ಸಹಾಯಕ್ಕೆ ಸದಾ ಮುಂದಿರುವ ಜೀವ. ಕಷ್ಟದಾರಿಯಲ್ಲೂ ಮನೆಯಲ್ಲಿ ಮಕ್ಕಳಲ್ಲಿ ನಗುವನ್ನು ತುಂಬುತ್ತಾ ಎಲ್ಲರ ಸ್ಫೂರ್ತಿಯಾಗಿ ಮಾರ್ಪಟ್ಟವಳು ಅವ್ವ.

> ಲಡಿಯನು ತೋಡಿ ಕಂಡಿಕೆಯ ಸುತ್ತಿ ಲಾಳಿಗೆ ಎಳೆಯಿತ್ತವಳು
> ಮಗ್ಗದ ಮನೆಯ ದುಗ್ಗಳೆಯಾದವಳು ರೇಷ್ಮೆಯ ಸೀರೆಗೆ
> ಚಿತ್ತಾರವ ಮೂಡಿಸಿ ಚಿಂದಿ ಸೀರೆಯನುಟ್ಟವಳು॥ ೧

ಮನೆ ಮಂದಿಯೆಲ್ಲ ದುಡಿದರೂ ಹೊಟ್ಟೆ ಬಟ್ಟೆಗೆ ಸಾಲದಾದಾಗ ಮಗ್ಗದ ಕೆಲಸವನ್ನು ಚಾಲೂ ಮಾಡಿದವಳು ಅವ್ವ, ರೇಷ್ಮೆ ಸೀರೆಗೆ ಚಿತ್ತಾರ ಬಿಡಿಸಿದರೂ ತಾನು ಚಿಂದಿ ಹುಟ್ಟು ಬದುಕು ಸವೆಸಿದವಳು. ಮಗ್ಗಗಳ ಸದ್ದು ನಿಂತು ಕೂಲಿ ಸಿಗದಿದ್ದಾಗ ಹಿಟ್ಟಿಗಾಗಿ ಬಟ್ಟೆಗಾಗಿ ವಲಸೆ ಹೊರಟವಳು, ಬಂಧುಗಳು ಮಾಡಿದ ನಿಂದೆ ಅಪಮಾನವನ್ನು ಸಹಿಸಿ ಒಲ್ಲದ ಮನಸ್ಸಿನಲ್ಲಿ ತನ್ನೂರಿಗೆ ಹಿಂತಿರುಗಿದವಳು. ಮಗ್ಗದ ಗೆದ್ದಲ ಸ್ಥಿತಿ ಕಂಡು ಮರುಗಿದವಳು, ಮತ್ತೆ ಮಗ್ಗದ ಕೆಲಸವನ್ನು ಪ್ರಾರಂಭಿಸಿದವಳು ಅವ್ವ. ಹಿತ್ತಲು, ಕೊಟ್ಟಿಗೆ, ಕರು, ಗಂಜಳ, ತಿಪ್ಪೆ ಎಂದು ಹತ್ತಾರು ಕೆಲಸಗಳಲ್ಲಿ ತೊಡಗಿ ಮಕ್ಕಳ ಕಟ್ಟಿ ಬೆಳಸಿ ಅವರು ಪಾಲಾಗುವಾಗ ಬಿಕ್ಕಿ ಮನೆಯ ಹರ್ಷದ ಬೆಳಕಾಗಿ ನಿಂತ ಹಿರಿಜೀವ ಅವ್ವ.

ಹೆಣ್ಣಿನ ನವಿರು ಭಾವಗಳನ್ನು ತುಂಬಿಕೊಂಡ ಕವಿತೆ 'ಅಳದಿರು ಅರ್ಧಾಂಗಿ'. ಮದುವೆ ಎಂಬುದು ಎರಡು ಮನಸ್ಸುಗಳ ಸಮ್ಮಿಲನ ಮಾತ್ರವಲ್ಲ, ಎರಡು ಮನೆಗಳ ಸಾಂಸ್ಕೃತಿಕ ಕೊಡುಕೊಡುಗೆ ಮತ್ತು ಸಾಮರಸ್ಯದ ಒಪ್ಪಂದವಾಗಿರುತ್ತದೆ. ನವಿರಾದ ಭಾವಗಳನ್ನು ಹೊತ್ತ ಹೆಣ್ಣು ಒಂಟಿತನ ಭಾವ ಅನುಭವಿಸುವಾಗ ಕವಿ ಮನಸ್ಸು ಕೊಟ್ಟಿರುವ ಸಾಂತ್ವನದ ಉತ್ತರ ಅಚ್ಚರಿಯನ್ನು ಮೂಡಿಸುತ್ತದೆ.

> ಸಾಕು ವಯಾಕೆನ್ನ ಪಾಂಖಿಸಖಿ
> ನಿನ್ನ ನಿಟ್ಟುಸಿಲು ನೀಲಗಾಳಿ
> ಮಗುವಾಚೆ ನಿನ್ನ ಮಖಲೊಳಗೆ ನಾನು
> ಲಾಲಿಂಖುನು ಹಾಕು ಗೊಪ್ಪಲನು ಗೂಗಿ
> ನಗೆಂಖು ಪರಿಮಳವ ಮನೆ ತುಂಬ ಚೆಲ್ಲಿ॥ ೨

ಮನೆಗೆ ಮನಸ್ಸಿಗೆ ಬಂದ ಹೆಣ್ಣಿಗೆ ಇಷ್ಟೊಂದು ಗೌರವ ನೀಡಿದ ಕವಿ ಆಕೆಯ ನಗೆಯ ಪರಿಮಳ ಮನೆ ತುಂಬ ಚಲ್ಲಲಿ ಎಂದು ಬಯಸುವುದಲ್ಲದೆ, ತನು ಮನ ದಣಿವಂತೆ ಕುಣಿಯೋಣ ಸಮರಸ ಗೀತೆಯನ್ನು ಹಾಡೋಣ ಎಂದಿದ್ದಾರೆ. ಹೆಣ್ಣಿನ ಮೃದು ಮಧುರತೆಗೆ ಕವಿಯಿಂದ ಸಿಕ್ಕ ಗೌರವ ಸತ್ಕಾರ ಓದುಗರ ಮನಸ್ಸನ್ನು ಹಿತವಾಗಿ ಸ್ಪರ್ಶಿಸಿ ನಿಲ್ಲುತ್ತದೆ.

**೨. ಪ್ರಾಪಂಚಿಕ ಕವನಗಳು**

'ಲಾಳಿ ಬಿಟ್ಟ ಎಳೆ' ಕವನ ಸಂಕಲನದಲ್ಲಿ ಕವಿ ಸುತ್ತಾಟದಲ್ಲಿ ಸಿಕ್ಕ ಕೆಲವು ಪಾತ್ರಗಳು ಕವನಗಳಾಗಿ ಮೈದಳೆದಿವೆ. ಕನ್ನಡಿ ನಮ್ಮ ರೂಪವನ್ನು ತೋರಿಸುತ್ತದೆ. ಮನಸ್ಸಿನ ಕಸ ಕಲ್ಮಶಗಳ ಕುರೂಪವನ್ನು ತೋರಿಸುವುದಿಲ್ಲ. ಬಿಂಬ ಗರ್ವ ಬಿಟ್ಟು ಬಯಲಿಗೆ ಬಂದಾಗ ನಮ್ಮೊಳಗಿನ ಕುರೂಪಗಳು ಕಾಣುತ್ತವೆ. ಕುರೂಪ ಅಳಿದ ಮೇಲೆ ನಿಜವಾದ ರೂಪ ಗೋಚರವಾಗುತ್ತದೆ. 'ಕಾಮನ ಕುದ್ರಿ' ಕವನದಲ್ಲಿ ಕವಿ ಕಾಮನ ಮಿಂಚಿನ, ಸಂಚಿನ ಓಟವನ್ನು ಕಡಿವಾಣ ಹಿಡಿದು ಧ್ಯಾನಸ್ಥ ಸ್ಥಿತಿಗೆ ತಂದಾಗಲೂ ಮಾಯದ ಕುದುರೆ ಯೋಗದ, ಭೋಗದ ಬಾಗಿಲು ತೆಗೆದು ಸುಖಿಯಾಗು ಎಂದು ಹೇಳುತ್ತದೆಂದು ಚಿತ್ರಿಸಿದ್ದಾರೆ. ಕಾಮನ ಕುದುರೆಯ ಚಲನೆಯನ್ನು ಕವಿ ಸೂಕ್ಷ್ಮ ಸ್ಥರದಲ್ಲಿ ಹಿಡಿದಿಟ್ಟಿದ್ದಾರೆ. 'ತೊಳೆದು ಬಿಡು ಎಲ್ಲಾ' ಕವಿತೆ ಕಾಮನ ಕುದ್ರಿ ಕವಿತೆಯ ಮುಂದುವರಿದ ಭಾಗದಂತೆ ಗೋಚರಿಸುತ್ತದೆ. 'ಗಸಿ ತಾನು ತಳವ ಸೇರಿ ಅಳವುಗೆಡಿಸಿ ಹೋಗುತ್ತದೆ' ಅದನ್ನು ಸ್ವಚ್ಛವಾಗಿ 'ತೊಳೆದು ಬಿಡು' ಎಂದು ಸಂದೇಶ ಕೊಡುವ ಕವಿ ರಾಗ ದ್ವೇಷಗಳಿಂದ ಮುಕ್ತವಾಗಿ ಮನಸ್ಸಿನ ನಿರ್ಮಲತೆ ಸಾಧಿಸುವ ಕಡೆಗೆ ಬರುವುದನ್ನು, ಸ್ವಚ್ಛ ಸ್ಥಿತಿಗೆ ತಲುಪುವುದನ್ನು ಕಲ್ಮಶ ಭಾವಗಳನ್ನು ತೊಳೆದು ಬಿಡುವುದು ಎಂದು ಹೇಳಿದ್ದಾರೆ.

'ಕವಿಯೆಂದರೆ', 'ನನ್ನವಳ ಮುನಿಸು', 'ಕವಿಯ ಸಾವು', 'ಕವಿಜನ ಮಾರ್ಗ', ಒಂದೇ ನಮೂನೆಯಲ್ಲಿ ಸಂಚರಿಸುವ ಕವಿತೆಗಳು. ಕವಿ ಕಾವ್ಯ ಬರೆಯುವಾಗ ಏನೆಲ್ಲವನ್ನು ವರ್ಣಿಸಿ ಕಾವ್ಯ ಕಡಲನ್ನು ಸೃಷ್ಟಿಸುತ್ತಾನೆ. ಆದರೂ ಭೇದ ಭಾವ ಮರೆತು ಕಾರುಣ ಮೈತ್ರಿಯ ಶಾಂತಿದೂತನಾಗಿ ನಿಲ್ಲುತ್ತಾನೆ. ಹೆಣ್ಣಿನ ಸೌಂದರ್ಯವನ್ನು ವೃದ್ಧಿಸುವ ಒಡವೆಗಳನ್ನು ಒಂದೊಂದಾಗಿ ತೊಡಿಸುವಂತೆ ಕಾವ್ಯಕನ್ನಿಕೆಯನ್ನು ಶೃಂಗರಿಸುವ ಕವಿ ಪದಗಳೊಂದಿಗೆ ಚಮತ್ಕಾರ ತೋರುತ್ತಾನೆ, ಆದರೆ ಹೆಣ್ಣು ಬಯಸುವುದು ಮುಡಿ ತುಂಬ ಮಲ್ಲಿಗೆಯಷ್ಟೆ ಎಂದು ಅರಿತಾಗ ಕವಿ ರಸಿಕನೇ ಮೌನ ತಾಳುವ ಸ್ಥಿತಿ ಬರುತ್ತದೆ. ಕವಿ, ಕಾವ್ಯರಚನೆ, ವರ್ಣನೆ ಮುಂತಾದ ವಿಚಾರಗಳ ಮೇಲೆ ಕವನ ರಚಿಸಿ ವಿಚಾರಗಳನ್ನು ನಯವಾಗಿ ತಿಳಿಸುತ್ತಲೇ ವಾಸ್ತವಗಳನ್ನು ಮನದಟ್ಟು ಮಾಡಿಸುವ ಕವಿ ಪ್ರಯತ್ನ ಮೆಚ್ಚುವಂತದ್ದಾಗಿದೆ.

ರಾಜಕೀಯಕ್ಕೆ ಸಂಬಂಧಿಸಿದ ವಿಚಾರಗಳು ಕವಿ ಮನ ಹೊಕ್ಕು ಕವನಗಳಲ್ಲಿ ಬಂದಿವೆ. ಕೃಷ್ಣನು ಬಿತ್ತಿದ ಬೀಜಗಳು ರೂಪಾಂತರಗೊಂಡು ರಾಕ್ಷಸರೆಂದು ತಿಳಿಯಲಾರದಷ್ಟು ಬಲವಾಗಿ ಬೆಳೆದು ಸಮಾಜದ ಶಾಂತಿಯನ್ನು, ನೀತಿಯನ್ನು ಅಳಿಸುತ್ತಿರುವುದಕ್ಕೆ ಕವಿ ಖೇದ ವ್ಯಕ್ತಪಡಿಸುತ್ತಾರೆ. ಸರ್ವೋದಯದ ಕನಸು ಕಟ್ಟಿ ಜಾತಿ ಮತ ಅಳಿದು ಮತ ಮಾನ್ಯಗಳು ಮಾಯವಾಗಿ, ಮೇಲು ಕೀಳು ಅಳಿದು, ರಾಜಕೀಯ ಕ್ರಾಂತಿ ಸಂಭವಿಸಿ ಮಾನವೀಯತೆಯನ್ನು ಎತ್ತಿಹಿಡಿವ ಸಮಾನತೆ ಮತ್ತು ಸರ್ವೋದಯದ ಕಾಲ ಮೂಡುತ್ತದೆಂಬ ಆಶಾಭಾವನೆ ಕವಿಯಲ್ಲಿ ಮೂಡಿದೆ.

### ೩. ಪಾರಮಾರ್ಥಿಕ ಕವನಗಳು

ವಚನ ಸಾಹಿತ್ಯ ಮತ್ತು ತತ್ವಪದಗಳ ಪ್ರಭಾವಕ್ಕೆ ಒಳಗಾಗಿರುವ ಕವಿತೆಗಳು ಪಾರಮಾರ್ಥಿಕ ವಿಚಾರಗಳ ಕಡೆಗೆ ಸೆಳೆಯುತ್ತವೆ. 'ಯಾಪಾರ ಮಾಡಾಕ ಹೊಂಟಿ', 'ಹೊಕ್ಬಳಸು ಇಲ್ಲೆ', 'ಮಿಂಚು ಹುಳು', 'ಉಬ್ಬಿತಯ್ಯ ಕೊಬ್ಬಿತಯ್ಯ ಕರಿಯ ಕೋಣ', 'ಎಂಥ ಮೋಜುಗಾರ ನೀನು', 'ಇನ್ನು ಬೇಕೆನ್ನದಿರು', 'ಮುಖವಾಡ ಮತ್ತು ಸುಂಕ', 'ಜೀವ ಜಾಲ' ಮುಂತಾದವು ಆಧ್ಯಾತ್ಮಿಕ ನೆಲೆಯಲ್ಲಿ ನಿಲ್ಲುವ ಕವನಗಳೆಂದು ಹೇಳಬಹುದು.

ಜೀವನ ವ್ಯಾಪಾರವನ್ನು ಸೂಚಿಸುವ ಸಂತಿಯಲ್ಲಿ ಮನುಷ್ಯ ಸುತ್ತಿ ಸುತ್ತಿ ತನ್ನ ಬೇಕು ಬೇಡಗಳನ್ನು ನೋಡಿಕೊಳ್ಳುತ್ತಾನೆ. ಮಾತಿನಲ್ಲಿ ಬಣ್ಣ ತುಂಬಿಕೊಂಡು ಮೋಸ ಮಾಡುವ ಮಂದಿ ಕಂಡು ಬೆರಗಾದರೂ ಸಂತಿಯಲ್ಲಿ ತಿರುಗುವುದು ಬಿಡುವುದಿಲ್ಲ. ಮಾನವ ತನ್ನ ಜೀವದ ಹಕ್ಕಿಯ ಕೀಲಿ ತಿಳಿಯುವುದಿಲ್ಲ, ಧ್ಯಾನ ಸೇರುವುದಿಲ್ಲ, ಬಾನ ಬಂಡಾರ ಬೇಕಿಲ್ಲ. ಜೀವ ಪಡುವ ಯಾತನೆಗೆ ಕೊನೆಯಿರುವುದಿಲ್ಲ ಎಂದು ತಿಳಿಸುವ ಕವಿ ಸೂಚ್ಯವಾಗಿ ನಶ್ವರಮಯವಾದ ಜೀವನದಲ್ಲಿ ಒದ್ದಾಡುವ ಜೀವದ ಕುರಿತು ವಿಚಾರ ಮಾಡಿದ್ದಾರೆ.

ಜೀವ ಕಾರುಣ್ಯದ ಮಳೆಯು ಬಂದು ಹಸುರು ತುಂಬಿ ಭವದ ಸುಖ ದುಃಖದ ಸವಿಯನ್ನು ಸವಿದು ನಂತರ ಮುಕ್ತಿಯತ್ತ ಚಲಿಸಬೇಕೆಂಬ ಸಂದೇಶವನ್ನು 'ಹೊಕ್ಬಳಸು ಇಲ್ಲೆ' ಕವಿತೆ ನೀಡುತ್ತದೆ.

ಅರಿವೆಂಬ ನೇಗಿಲ ಹರುಷದಿ ಹಿಡಿದು
ಮನವೆಂಬ ಮಣ್ಣನು ಹದವಾಗಿ ಹರಗು
ಮತಿಎಂಬ ಕೂರಿಗೆ ಕುಶಲಾದಿ ಹಿಡಿದು
ಹಸನುಳ್ಳ ಸದ್ಭಾವ ಬೀಜವ ಬಿತ್ತು ॥ [೩]

ಜೀವನಕ್ಕೆ ಬೇಕಾದ ಸತ್ವ ಗಳಿಸಲು ಒಬ್ಬ ನಿಷ್ಠಾವಂತ ರೈತನಂತೆ ದುಡಿಯುವ ಹೋಲಿಕೆ ಇಲ್ಲಿದೆ. ಜ್ಞಾನವೆಂಬ ನೇಗಿಲನ್ನು ಹರ್ಷದಿಂದ ಕಟ್ಟಿ ಮನವೆಂಬ ಮಣ್ಣನ್ನು ಹದಗೊಳಿಸಿ ಮತಿಯ ಕೂರಿಗೆಯನ್ನು ಕುಶಲದಿಂದ ಹಿಡಿದು ಒಳ್ಳೆಯ ಬೀಜಗಳನ್ನು ಬಿತ್ತಿದಾಗ ಮನಸ್ಸಿನಿಂದ ಒಳ್ಳೆಯ ಆಲೋಚನೆಗಳು, ವಿಚಾರಗಳು ಹೊರಬರುತ್ತವೆ. ಕೊನೆಯಿಲ್ಲದ ಕತ್ತಲೆಯನ್ನು ಕಳೆಯಲು ಬಂದ 'ಮಿಂಚು ಹುಳು' ಗಳು ಧೀರ ಗಂಭೀರ ಹಣತೆಗಳಂತೆ ಕೈ ಮರವಾಗಿ ಅಜ್ಞಾನದ ತಮವನ್ನು ಕಳೆಯುವ ಪರಿಯನ್ನು ಕವಿ ಬೆರಗಿನಿಂದ ನೋಡುತ್ತಾರೆ. ತಾನೂ ಒಂದು ಮಿಂಚು ಹುಳು ಎಂದು ಭಾವಿಸಿರುವುದು ಕವಿ ಮನದ ಧನ್ಯತೆಯನ್ನು ಸೂಚಿಸುತ್ತದೆ. 'ನಾ ಹೊರಟೆ ಸಿದ್ಧಪುರಕ್ಕೆ' ಆಧ್ಯಾತ್ಮಿಕ ಹಾದಿಯನ್ನು ಅರಸುವ ಕವನ ಸಿದ್ಧಪುರಕೆ ದಾರಿ ಯಾವುದೆಂದು ಹುಡುಕುತ್ತಾ ಹೊರಡುವ ಸಾಧಕನಿಗೆ ಕಲ್ಲು, ಮುಳ್ಳು, ಕಣಿವೆ, ಕಾಡುಪ್ರಾಣಿಗಳು ಎದುರಾಗುತ್ತವೆ. ಧೈರ್ಯ ಬೋಳೇಶನಾಗಿ ಕೈ ಹಿಡಿದರೆ ಅಂಜದೇ ಮುಂದೆ ಸಾಗಿ ಬಯಲಿನ ದರ್ಶನ ಪಡೆಯಬಹುದು. ಹುಟ್ಟಿದ ಜೀವಿ ಬಾಲ್ಯ ಯೌವನದಲ್ಲಿ ಸರಿದು ಎಲ್ಲರ ಜೊತೆಯಲ್ಲಿ ಸಹ ಜೀವನವನ್ನು ಕಂಡುಕೊಂಡು ದುಡಿದು ಸಂಸಾರದ ನೊಗವ ಹೊತ್ತು ಬೆಂದು ನಡೆವಾಗ.. ಕಾಲ ಕವಣೆಯ ಕಲ್ಲು ಬೀಸಿ ಮಾಗಿದ ಹಣ್ಣು ಜೀವವನ್ನು ಸಾವಿಗೆ ಕೆಡವುವ ಬಗೆಯನ್ನು ಎಂಥ ವಿಚಿತ್ರ ಕಾಲನ ನಡತೆ ಎಂದು ಕವಿ ಅಚ್ಚರಿಗೊಂಡಿದ್ದಾರೆ. ಮಂದಿ ಜನರ ಮಧ್ಯೆ ಉಬ್ಬಿ ಕೊಬ್ಬುವ ದೇಹವೆಂಬ ಕರಿಯ ಕೋಣ ಕೇಕೆ ಹಾಕಿ ಸಂಚರಿಸುತ್ತದೆ. ಆದರೆ ಕೊಬ್ಬಿಸಿದ ಕೋಣವನ್ನು ಮಾರಿ ಜಾತ್ರೆಯಲ್ಲಿ ಬಲಿ ಹಾಕುತ್ತಾರೆಂದು ಅದಕ್ಕೆ ಅರಿವಿರುವುದಿಲ್ಲ. ಮುಖಸ್ತುತಿಗೆ ಮರುಳಾಗಿ ಮೆರೆವ ಜನರನ್ನು ಕವಿ ಕೊಬ್ಬಿದ ಕರಿಯ ಕೋಣಕ್ಕೆ ಹೋಲಿಸುತ್ತಾರೆ. ದೈವದ ಕರುಣೆ ತಪ್ಪಿದ ಮೇಲೆ ಗುರುತಿಲ್ಲದೇ ನಾಶವಾಗುವ ಜೀವಿಗಳು, ಕೋಣ ಜೀವನದ ನಶ್ವರತೆಯ ಸಂಕೇತವಾಗಿ ಚಿತ್ರಣಗೊಂಡಿದೆ.

ನಾಲ್ಕು ಕಾಸು ದುಡಿಯಲು ಮುಖವಾಡ ತೊಡುವ ಜನ ಜಾತ್ರೆ ಬಂದಾಗ ಹಿಗ್ಗಿ ನಲಿದು ಹಣ ಮಾಡುವ ಹುನ್ನಾರ ಮುಖವಾಡ ಮತ್ತು ಸಂತ ಕವನದ ಮೂಲಕ ತಿಳಿಸಿದ್ದಾರೆ. ನಕಲಿ ಮುಖವಾಡ ಹೆಚ್ಚು ಕಾಲ ನಿಲ್ಲದು. ಕಣ್ಣಿಗೊಂದು ಭಾಷೆ, ಮನಸ್ಸಿಗೊಂದು ವೇಷ ತೊಟ್ಟು ಕೃಷ್ಣ ಶಕುನಿಯರನ್ನು ನೆನಪಿಗೆ ತರುವ ಜನರ ವ್ಯಾಪಾರಿ ಪ್ರವೃತ್ತಿಯನ್ನು ಕುರಿತು ಕವಿ ಬೆರಗನ್ನು ವ್ಯಕ್ತಪಡಿಸುತ್ತಾರೆ. ಜೀವ ಚೇತನದ ಮೇಲೆ ನಂಬಿಕೆ ಇಟ್ಟು, ಬದುಕಿನ ಸಾರ್ಥಕತೆಯ ಕಡೆ

ನಡೆಯಬೇಕೆಂದು ಸೂಚಿಸುವ ಕವಿ 'ಇನ್ನು ಬೇಕೆನ್ನದಿರು' ಕವನದ ಮೂಲಕ ತಮ್ಮ ಮನದ ಇಂಗಿತವನ್ನು ಕೀರ್ತನೆಯ ದಾಟಿಯಲ್ಲಿ ವ್ಯಕ್ತಪಡಿಸಿದ್ದಾರೆ. ಇನ್ನು ಬೇಕು, ಇನ್ನು ಬೇಕು ಎಂದು ಬಯಸಬೇಡ ಮನವೇ ತನುವನ್ನು ಜ್ಞಾನದಿಂದ ಹದಗೊಳಿಸು ಪ್ರಕೃತಿಯ ಮುಂದೆ ಹೂವಾಗಿ, ಗಿಡವಾಗಿ, ಫಲವಾಗಿ ಮರದ ಕಂಪಾಗಿ ಸಾಗುವ ಗಾಳಿಯೊಂದಿಗೆ ಸೇರಿ ಚೇತನವಾಗಿ ಸುಖಿಯಾಗಬೇಕು ಎಂದು ಮನವನ್ನು ಸಂತೈಸಿದ್ದಾರೆ. 'ಜೀವಜಾಲ' ಕವಿತೆ ಕೂಡ ಇದೇ ಮಾದರಿಯಲ್ಲಿದೆ. ಎಂಥಾ ಮಾಯಾಜಾಲವಯ್ಯ ಎಂಬ ಬೆರಗಿನಿಂದಲೇ ಪ್ರಾರಂಭವಾಗುವ ಕವಿತೆ ಜೀವ ಸಂಚರಿಸುವ ಬಲೆಗಳನ್ನು ತಿಳಿಸಿ ಕೊನೆಯಲ್ಲಿ ಶೂನ್ಯದಾಳದಲ್ಲಿ ಮುಳುಗುವ ಪರಿಯನ್ನು ವಿವರಿಸುತ್ತದೆ. ಕವಿ ಕಂಡುಕೊಂಡ ಜೀವನ ಸತ್ಯಗಳು, ಅನುಭವಗಳು ಕವನ ರೂಪದಲ್ಲಿ ಮುಪ್ಪರಿಗೊಂಡು ಲೋಕಾನುಭವದ ತಿಳಿನೀರನ್ನು ಓದುಗನಿಗೆ ನೀಡಿ ಸಾರ್ಥಕತೆಯ ಭಾವದಲ್ಲಿ ನಿಲ್ಲುವುದನ್ನು, ಕವಿ ಚೇತನದ ನಮ್ರ ಧನ್ಯಭಾವವನ್ನು ಈ ಕವನ ಸಂಕಲನದಲ್ಲಿ ಕಾಣಬಹುದಾಗಿದೆ.

**ಉಲ್ಲೇಖಗಳು**


೧. **'ಲಾಳಿ ಬಿಟ್ಟ ಎಳೆ'**, ಡಾ.ಶಿವಲಿಂಗಮೂರ್ತಿ, ಮಿಂಚು ಪ್ರಕಾಶನ, ತುಮಕೂರು, ಮೊದಲ ಮುದ್ರಣ– ೨೦೨೩, ಪುಟ–೨೫.

೨. ಅದೇ, ಪುಟ– ೩೧.

೩. ಅದೇ, ಪುಟ– ೩.

೪. 'ಲಾಳಿ ಬಿಟ್ಟ ಎಳೆ', ಡಾ.ಶಿವಲಿಂಗಮೂರ್ತಿ, ಮಿಂಚು ಪ್ರಕಾಶನ, ತುಮಕೂರು, ಮೊದಲ ಮುದ್ರಣ– ೨೦೨೩.